ಪ್ರಹಸನ ಪ್ರಸಂಗ

'ಯುಕ್ತ ಬಲ್ಲವರಿಗೆ ತತ್ತ್ವ ಹೇಳುವ ಚಿಂತೆ' ಎಂದು ಪುರಂದರದಾಸರು ಹೇಳುವಂತೆ ಕೆಲವು ತಂದೆತಾಯಿಗಳಿಗೆ ಸದಾ ಮಕ್ಕಳಿಗೆ ಉಪದೇಶ ಕೊಡುವ ಕಾತರ, ಚಾಳಿ ಕಂಡುಬರುತ್ತದೆ. ಮಕ್ಕಳು ತಮ್ಮ ಸೂಕ್ಷ್ಮವಾದ ಮನಸ್ಸು, ಹಾಗೂ ಭಾವನೆಗಳಿಂದ ತಮ್ಮ ಪೋಷಕರನ್ನೂ ಪರೀಕ್ಷಿಸುತ್ತಿರುತ್ತಾರೆ ಎಂಬುದನ್ನು ಅವರು ಮರೆತೇಬಿಟ್ಟಿರುತ್ತಾರೆ.

ಒಂದು ಸಣ್ಣ ಹುಡುಗಿ ತಾಯಿ ಪಾತ್ರೆಗಳನ್ನು ತೊಳೆಯುತ್ತಿರುವುದನ್ನು ನೋಡುತ್ತಿದ್ದಳು. ತಾಯಿಯ ತಲೆಗೂದಲಿನಲ್ಲಿ ಕೆಲವು ಬಿಳಿಯ ಎಳೆಗಳನ್ನು ಕಂಡು ಕುತೂಹಲದಿಂದ ಕೇಳಿದಳು, "ಅಮ್ಮ, ನಿನ್ನ ತಲೆಯ ಕೂದಲುಗಳಲ್ಲಿ ಕೆಲವು ಬೆಳ್ಳಗಿವೆಯಲ್ಲ! ಏಕೆ?" ತಾಯಿ ಹೇಳಿದಳು, "ನೋಡು ಪುಟ್ಟ, ನೀನು ನನಗೆ ಸುಳ್ಳು ಹೇಳಿದಾಗ, ದುಃಖ ಉಂಟುಮಾಡಿದಾಗ, ಅಥವಾ ಕೆಟ್ಟದ್ದನ್ನು ಮಾಡಿದಾಗ ನನ್ನ ಒಂದೊಂದು ಕೂದಲು ಬೆಳ್ಳಗಾಗುವುದು." ತಾಯಿ ಹೇಳಿದ್ದನ್ನು ಕೇಳಿಸಿಕೊಂಡು ಸ್ವಲ್ಪ ಆಲೋಚಿಸಿದ ನಂತರ ಮಗಳು ಕೇಳಿದಳು, "ಅಮ್ಮ, ಹಾಗಿದ್ದರೆ ಅಜ್ಜಿಯ ತಲೆ ಸಂಪೂರ್ಣವಾಗಿ ಬೆಳ್ಳಗಾಗಿದೆಯಲ್ಲ!"

* * *

ನಾವೇ ಬುದ್ಧಿವಂತರು ಎಂಬ ಧೋರಣೆ ಕೆಲವರಿಗೆ. ಆದರೆ ಅದು ಸುಳ್ಳು ಎಂಬ ಕಟುಸತ್ಯದ ಅರಿವು ಮೂಡಿದಾಗ ತಿದ್ದಿಕೊಳ್ಳುವ ಅವಕಾಶ ಒದಗಿದಂತಾಗುತ್ತದೆ. ಇಂತಹ ಅವಕಾಶವನ್ನು ಮಕ್ಕಳೂ ಒದಗಿಸಬಲ್ಲರು. ಹಿರಿಯರಿಂದ ಮಾತ್ರ ನಾವು ಕಲಿಯುತ್ತೇವೆ ಎಂಬುದು ತಪ್ಪು ಕಲ್ಪನೆ.

ಒಂದು ಧಾರ್ಮಿಕ ಶಾಲೆಯ ಊಟದ ಮನೆಯಲ್ಲಿ ಮಕ್ಕಳೆಲ್ಲ ಊಟಕ್ಕಾಗಿ ಕಾದು ನಿಂತಿದ್ದರು. ಅಲ್ಲಿ ಒಂದು ಕಡೆ ಮಕ್ಕಳಿಗಾಗಿ ಸೇಬುಗಳನ್ನು ಬುಟ್ಟಿಯಲ್ಲಿ ಇಟ್ಟಿದ್ದರು. ಆ ಸಂಸ್ಥೆಯ ಪಾದ್ರಿಗಳು ಆ ಬುಟ್ಟಿಗೆ ಒಂದು ಚೀಟಿಯನ್ನು ಅಂಟಿಸಿದ್ದರು: "ಒಂದು ಸೇಬನ್ನು ಮಾತ್ರ ತೆಗೆದುಕೊಳ್ಳಿ. ದೇವರು ನೋಡುತ್ತಿದ್ದಾನೆ." ಕೋಣೆಯ ಮತ್ತೊಂದೆಡೆ ಟೇಬಲ್ಲಿನ ಮೇಲೆ ಚಾಕಲೇಟುಗಳನ್ನು ಇಟ್ಟಿದ್ದರು. ಒಂದು ಮಗು ಆ ತಟ್ಟೆಯ ಬಳಿ ಒಂದು ಚೀಟಿಯನ್ನು ಬರೆದು ಇಟ್ಟಿತು: "ಎಷ್ಟು ಬೇಕಾದರೂ ತೆಗೆದುಕೋ. ದೇವರು ಸೇಬುಗಳನ್ನು ಕಾಯುತ್ತಿದ್ದಾನೆ."

* * *

ಪ್ರೀತಿಯ ಹೆಸರಿನಲ್ಲಿ ನಾವು ಸ್ವಾರ್ಥವನ್ನೇ ಸಾಧಿಸುತ್ತಿರುತ್ತೇವೆ. ನಮ್ಮ ಸುಖಕ್ಕಾಗಿ ಮತ್ತೊಬ್ಬರನ್ನು ಪ್ರೀತಿಸುವುದು ನಿಜವಾದ ಪ್ರೀತಿಯೆನಿಸಿಕೊಳ್ಳದು. ನಿಜವಾದ ಪ್ರೀತಿ ಬಂಧನಕ್ಕೆ ದಾರಿಯಾಗದೆ ಮುಕ್ತಿಗೆ, ಶ್ರೇಯಸ್ಸಿಗೆ ದಾರಿ ಮಾಡಿಕೊಡುವುದು. ಇಬ್ಬರು ಪ್ರೇಮಿಗಳ ಮಧ್ಯೆ ನಡೆದ ಸಂಭಾಷಣೆ ಹೀಗಿದೆ :

ಆಕೆ : ನೀನು ನನ್ನನ್ನು ಪ್ರೀತಿಸುವೆಯಾ?

ಆತ : ಹೌದು! ನಾನು ನಿನ್ನನ್ನು ನಿಜವಾಗಿ ಪ್ರೀತಿಸುವೆನು.

ಆಕೆ : ಹಾಗಿದ್ದರೆ ನನಗಾಗಿ ನೀನು ಪ್ರಾಣತ್ಯಾಗಕ್ಕೂ ಸಿದ್ಧನಿದ್ದೀಯಾ?

ಆತ : ಇಲ್ಲ, ನನ್ನದು ಸಾವಿಲ್ಲದ ಪ್ರೀತಿ!

* * *

ಧರ್ಮದ ಆಚರಣೆಯಲ್ಲಿ ಕಷ್ಟ, ಪರಿಶ್ರಮಗಳನ್ನು ತಪ್ಪಿಸಿಕೊಳ್ಳಲು ಸುಲಭೋಪಾಯದ ನಿದರ್ಶನವೊಂದನ್ನು ನೋಡಿ.

ಒಬ್ಬ ಬಾಲಕ ಭಾನುವಾರದಂದು ಚರ್ಚಿಗೆ ಹೋಗಿದ್ದಾಗ ಪ್ರಾರ್ಥನೆಯ ಬಳಿಕ ತನ್ನ ತಾಯಿಗೆ ಹೇಳಿದ, "ಅಮ್ಮ, ದೊಡ್ಡವನಾದ ಮೇಲೆ ನಾನು ಪಾದ್ರಿಯಾಗುವೆ ಎಂದು ತೀರ್ಮಾನಿಸಿದ್ದೇನೆ." "ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಹೇಗೆ ಅಂತಹ ತೀರ್ಮಾನಕ್ಕೆ ಬಂದೆ?" ಎಂದು ತಾಯಿ ಆಶ್ಚರ್ಯದಿಂದ ಕೇಳಿದಳು. "ನೋಡು, ನಾನು ಹೇಗಿದ್ದರೂ ಪ್ರತಿ ಭಾನುವಾರ ಕಡ್ಡಾಯವಾಗಿ ಚರ್ಚಿಗೆ ಹೋಗಲೇಬೇಕು. ಹಾಗಿರುವಾಗ ಅಲ್ಲಿ ಮೊಣಕಾಲೂರಿ ಪ್ರಾರ್ಥನೆ ಮಾಡುವುದಕ್ಕಿಂತ ಪಾದ್ರಿಯಾಗಿ ನಿಂತು ಜೋರಾಗಿ ಮನಬಂದಂತೆ ಹರಟುವುದೇ ಮಜ ಎಂದು ತೋರುತ್ತದೆ!"

ಆಶ್ರಮದ ಕಾರ್ಯಕ್ರಮಗಳು

ಫೆಬ್ರವರಿ 2005

ಸ್ವಾಮಿ ವಿವೇಕಾನಂದ ಜಯಂತಿ	1	ಮಂಗಳವಾರ
ಏಕಾದಶಿ	5	ಶನಿವಾರ
ಸ್ವಾಮಿ ಬ್ರಹ್ಮಾನಂದ ಜಯಂತಿ	10	ಗುರುವಾರ
ಸ್ವಾಮಿ ತ್ರಿಗುಣಾತೀತಾನಂದ ಜಯಂತಿ	12	ಶನಿವಾರ
ಏಕಾದಶಿ	19	ಶನಿವಾರ
ಸ್ವಾಮಿ ಅದ್ಭುತಾನಂದ ಜಯಂತಿ	23	ಬುಧವಾರ

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿ ಮತ್ತು ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಸಂಜೆ ೬ರಿಂದ ಪ್ರವಚನಗಳು ಇರುತ್ತವೆ. ಪ್ರತಿ ಏಕಾದಶಿಯಂದು ರಾಮ ನಾಮ ಸಂಕೀರ್ತನೆ ಇರುತ್ತದೆ.